ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : 114

[illegible]ನೇ ವರ್ಷ 23ನೇ ಸಂಚಿಕೆ ಕೊಪ್ಪ 21-1-1990 ಭಾನುವಾರ. ಬೆಲೆ 60 ಪೈಸೆ

ಮಕ್ಕಳ ಆಟಿಕೆ ಬ್ಯಾಂಕ್ ಉದ್ಘಾಟನೆ

ಉತ್ತಮೇಶ್ವರ : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಇಲ್ಲಿನ ಮೈಸೂರು ಬ್ಯಾಂಕ್ ಮತ್ತು ದುರ್ಗಾ ಪರಮೇಶ್ವರಿ ಮಹಿಳಾ ಸಮಾಜಗಳ ಸಂಯುಕ್ತ ಆಶ್ರಯದಲ್ಲಿ ಜ. 11 ರಂದು ಮಕ್ಕಳ ಆಟಿಕೆಗಳ ಬ್ಯಾಂಕ್ ಹಾಗೂ ಕ್ರಿಯಾತ್ಮಕ ಸಾಕ್ಷರತಾ ಆಂದೋಲನದ ಉದ್ಘಾಟನೆ ಆನಂದ ರಾಮ ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಸಕ ಯು. ಕೆ. ಶಾಮಣ್ಣ ಉದ್ಘಾಟನೆ ನೆರವೇರಿಸಿದರು. ಬಿ. ಜಿ. ಚಿದಂಬರ್ ಮತ್ತು [illegible] ರಾಜ್ ಮುಖ್ಯ ಅತಿಥಿಗಳಾಗಿದ್ದರು. ರಾಜೇಂದ್ರ ಬೇಕಲ್ ಕಾರ್ಯಕ್ರಮಗಳ ಕಿರು ಪರಿಚಯ ಮಾಡಿ, ದಾನಿಗಳಿಂದ ಮಕ್ಕಳಿಗಾಗಿ ಆಟಿಕೆಗಳನ್ನು (ಹಳೆಯ, ಹೊಸ) ಸಂಗ್ರಹಿಸುವುದು ಈ ಬ್ಯಾಂಕ್ ಉದ್ದೇಶವೆಂದರು. ಸಾಕ್ಷರತಾ ಕಿಟ್‌ಗಳನ್ನೂ ಈ ಸಂದರ್ಭದಲ್ಲಿ ವಿತರಿಸಲಾಯಿತು.

ಡಾ|| ಕೋದಂಡರಾಂ ಸ್ವಾಗತಿಸಿ, ಶಕುಂತಲಾ ವಂದಿಸಿದರು.

ರಾತ್ರಿ ಪಹರೆಯ ಅರಣ್ಯ ಸಿಬ್ಬಂದಿಗೆ ಸಿಕ್ಕಿ ಬಿದ್ದ ಕಳ್ಳಸಾಗಣೆದಾರರು :

2.30 ಲಕ್ಷ ರೂ. ಅಕ್ರಮ ಮದ್ಯ ವಶ

ಕೊಪ್ಪ: ರಾತ್ರಿ ಪಹರೆಯಲ್ಲಿದ್ದ ಅರಣ್ಯ ಸಿಬ್ಬಂದಿ ಶಂಕಾಸ್ಪದ ಲಾರಿಯೊಂದನ್ನು ತಪಾಸಣೆ ಮಾಡಿದಾಗ ಅಕ್ರಮವಾಗಿ ಸಾಗಣೆಯಾಗುತ್ತಿದ್ದ ಸುಮಾರು 2.30 ಲಕ್ಷ ರೂ. ಬೆಲೆಯ 'ಸೆಕೆಂಡ್ಸ್' ಮದ್ಯ ಪತ್ತೆಯಾಗಿದೆ.

ಬಾಳೆಹೊನ್ನೂರು ಬಳಿ ಪತ್ತೆಯಾದ [illegible]ಎಲ್ 6073 ನಂಬರಿನ ಈ ಲಾರಿಯನ್ನು ಕೊಪ್ಪಕ್ಕೆ ತಂದು, ಪ್ರಕರಣ ದಾಖಲು ಮಾಡಿಕೊಂಡಿರುವ ವಲಯ ಅರಣ್ಯಾಧಿಕಾರಿ ಶ್ರೀನಿವಾಸ ರಾವ್, ಡ್ರೈವರ್ ಸಹಿತ ಲಾರಿಯಲ್ಲಿದ್ದ ನಾಲ್ವರು ಆರೋಪಿಗಳನ್ನೂ, ಮಾಲನ್ನೂ ಅಬಕಾರಿ ಸರ್ಕಲ್ ಇನ್ಸ್‌ಪೆಕ್ಟರ್ ವಶಕ್ಕೊಪ್ಪಿಸಿ, ಪ್ರಕರಣವನ್ನು ಮುಂದಿನ ತನಿಖೆಗಾಗಿ ಅವರಿಗೆ ವರ್ಗಾಯಿಸಿದ್ದಾರೆ.

'ಜಿಪ್ಸಿ' ಸುಳಿವು

ಬಾಳೆಹೊನ್ನೂರಿನಲ್ಲಿ ಜ. 20ರ ಬೆಳಗಿನ ಜಾವ 5 ಗಂಟೆ ಹೊತ್ತಿನಲ್ಲಿ ಶಂಕಾಸ್ಪದವಾಗಿ ಕಂಡ ಮಾರುತಿ ಜಿಪ್ಸಿ ಕಾರಿನಲ್ಲಿದ್ದ 6 ಜನರನ್ನು ಅಲ್ಲಿನ ವಲಯ ಅರಣ್ಯ ಕಚೇರಿಗೆ ಕರೆದೊಯ್ದು ಪ್ರಶ್ನಿಸಿದಾಗ ಈ ಲಾರಿಯ ಅಸ್ಪಷ್ಟ ಸುಳಿವು ದೊರೆತು, [illegible]ಗೋಡಿನ ಬಳಿ ಲಾರಿಯನ್ನು ತಡೆಯಲಾಯಿತು. ಬೆಂಗಳೂರಿಗೆ ರೆಡ್ ಆಕ್ಸೈಡ್ ಡಬ್ಬಿಗಳನ್ನೂ, ಚಿಕ್ಕಮಗಳೂರಿಗೆ 'ಫಾರ್ಮಾಲ್ಡಿಹೈಡ್' ಎಂಬ ರಾಸಾಯನಿಕವನ್ನೂ ಹೊತ್ತು ಹೊರಟಿದ್ದ ಲಾರಿ ಇಲ್ಲಿಗೆ ಬಂದ ಬಗ್ಗೆ ಸಮರ್ಪಕ ವಿವರಣೆ ಬರಲಿಲ್ಲ. ಬದಲು 15 ಸಾವಿರ, 25 ಸಾವಿರ, ಕೊನೆಗೆ "ನೀವು ಎಷ್ಟು ಕೇಳ್ತೀರಿ ಅಷ್ಟು" ಎಂಬ ಆಮಿಷ ಬಂದಾಗ ಅರಣ್ಯ ಸಿಬ್ಬಂದಿ ಬಂದೂಕಿನ ಬಲದಲ್ಲಿ ಲಾರಿಯನ್ನು ಕೊಪ್ಪಕ್ಕೆ ತಂದರು.

ರಾಸಾಯನಿಕವಲ್ಲ, ಮದ್ಯ

ಪರಿಶೀಲಿಸಿದಾಗ, ಫಾರ್ಮಾಲ್ಡಿಹೈಡ್ ಬದಲು 48 ಕ್ವಾರ್ಟರ್ ಬಾಟಲಿಗಳ 320 ಕೇಸ್ ಭರ್ತಿ 'ಸೆಕೆಂಡ್ಸ್' ಮದ್ಯ ಪತ್ತೆಯಾಯಿತು. ಅದನ್ನು ಕೊಪ್ಪದ ಡಯಾಸ್‌ರವರಿಗೆ ಸರಬರಾಜು ಮಾಡಲು ಗುಜರಾತಿನ ವಾಪಿಯಿಂದ ತಂದಿರುವುದೆಂದು ಲಾರಿಯ ಸಿಬ್ಬಂದಿ ತಿಳಿಸಿರುವುದಾಗಿ ಗೊತ್ತಾಗಿದೆ. ಅಬಕಾರಿ ಸಿಬ್ಬಂದಿ ಮುಂದಿನ ತನಿಖೆ ನಡೆಸುತ್ತಿದ್ದಾರೆ. ಈ ಲಾರಿ ಒಂದರ್ಧ ಲೋಡನ್ನು ಚಿಕ್ಕಮಗಳೂರಿನ ವ್ಯಾಪಾರಿಯೊಬ್ಬರಿಗೆ ಇಳಿಸಿ ಬಂದಿತ್ತೆಂದೂ ಹೇಳಲಾಗಿದೆ.

ಮಾರುತಿ ಕಾರಿನಲ್ಲಿದ್ದವರು ಈ ಲಾರಿಗೆ ರಕ್ಷಣೆಯಾಗಿ ಮುಂಚೂಣಿಯಲ್ಲಿ ಪ್ರಯಾಣಿಸುತ್ತಿದ್ದು, ಇವರಿಂದ ಈ ಅಕ್ರಮ ಸಾಗಣೆ ಜಾಲದ ಬಗ್ಗೆ ಪ್ರಮುಖ ಸುಳಿವು ಸಿಗಬಹುದೆಂದು ಹೇಳಲಾಗಿದೆ.

'ಹೀರೋ'ಗಳು

ಶ್ರೀನಿವಾಸರಾವ್ ನೇತೃತ್ವದ ತಂಡದಲ್ಲಿದ್ದ ಅರಣ್ಯ ಸಿಬ್ಬಂದಿಗಳಿವರು : ಫಾರೆಸ್ಟರ್ ದೊಡ್ಡ ಸಿದ್ದಪ್ಪ, ಚಾಲಕ ಸೋಮಶೇಖರ್, ಗಾರ್ಡ್‌ಗಳಾದ ರೇವಣ್ಣ, ಭದ್ರಯ್ಯ, ಗುರುಮೂರ್ತಿ, ಕೃಷ್ಣಮೂರ್ತಿ ಮತ್ತು ಮುರುಗೇಶ್.

ಅಣ್ಣಪ್ಪ ಪೈ ಸ್ಮಾರಕ ಸಾಂಸ್ಕೃತಿಕ ಸ್ಪರ್ಧೆಗಳು

ಹರಿಹರಪುರ : ಇಲ್ಲಿನ ಕಿರಿಯ ಕಾಲೇಜಿನಲ್ಲಿ ಜ. 24 ರಂದು ಪ್ರತಿಭಾ ಪುರಸ್ಕಾರ ಮತ್ತು ಶಾಲಾ ವಾರ್ಷಿಕ ಕ್ರೀಡೋತ್ಸವ ಹಾಗೂ ಜ. 25 ರಂದು ದಿ|| ಸಿಗದಾಳು ಅಣ್ಣಪ್ಪ ಪೈ ಸ್ಮಾರಕ (2ನೇ ವರ್ಷದ) ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯುತ್ತವೆ. ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಹಂತಗಳಲ್ಲಿ ನಡೆಯುವ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಚರ್ಚಾಸ್ಪರ್ಧೆ, ರಸಪ್ರಶ್ನೆ ಮತ್ತು ಭಾವಗೀತೆ ಸ್ಪರ್ಧೆಗಳಿವೆ. ಅಣ್ಣಪ್ಪ ಪೈಯವರ ಮಕ್ಕಳಾದ ಶಿವಪ್ರಸಾದ್ ಮತ್ತು ಸೋದರರು ಈ ಸ್ಪರ್ಧೆಗಳಿಗೆ ಪ್ರಾಯೋಜಕರಾಗಿದ್ದು, ಬಹುಮಾನಗಳನ್ನು ನೀಡಿದ್ದಾರೆ.

ಮಧ್ಯಾಂತರ ಮಂ. ಪಂ. ಚುನಾವಣೆಗೆ ಫೆ. 3ರಿಂದ 10ರವರೆಗೆ ನಾಮಪತ್ರ ಸಲ್ಲಿಕೆ

ಕೊಪ್ಪ: ಮಧ್ಯಂತರ ಮಂಡಲ ಪಂಚಾಯ್ತಿಗಳಿಗೆ ಫೆ. 25ರಂದು ನಡೆಯುವ ಚುನಾವಣೆಗೆ ನಾಮ ಪತ್ರಗಳನ್ನು ಫೆ. 3 ರಿಂದ 10ರವರೆಗೆ ಸ್ವೀಕರಿಸಲಾಗುತ್ತದೆ. ನಾಮಪತ್ರಗಳ ಪರಿಶೀಲನೆ ಫೆ 12ರಂದು ಹಾಗೂ ನಾಮಪತ್ರ ಹಿಂತೆಗೆದುಕೊಳ್ಳಲು ಕಡೇ ದಿನ ಫೆ. 14. ಮತದಾನದ ಅವಧಿ ಬೆಳಗ್ಗೆ 8 ಗಂಟೆಯಿಂದ ಸಂಜೆ 5ರವರೆಗೆ.

ಕೊಪ್ಪ: ವಿವರ

ಕೊಪ್ಪ ಮಂ. ಪಂಚಾಯ್ತಿಗೆ 6 ವಿಭಾಗಗಳಿಂದ 11 ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ಎಲ್ಲಾ 6 ವಿಭಾಗಗಳಲ್ಲೂ ತಲಾ 1 ಸಾಮಾನ್ಯ ಸ್ಥಾನ, 1 ಮತ್ತು 5ನೇ ವಿಭಾಗಗಳಲ್ಲಿ ತಲಾ 1 ಪ. ಜಾತಿ/ಪಂಗಡದ ಮೀಸಲು ಸ್ಥಾನ, ಮತ್ತು ತಲಾ 1 ಮಹಿಳಾ ಮೀಸಲು ಸ್ಥಾನ ಹಾಗೂ 2ನೇ ವಿಭಾಗದಲ್ಲಿ 1 ಪ. ಜಾತಿ/ಪಂಗಡದ ಮಹಿಳಾ ಮೀಸಲು ಸ್ಥಾನ. ಒಟ್ಟಾರೆ— ವಿಭಾಗ 1ರಲ್ಲಿ 3 ಸ್ಥಾನ, 2ರಲ್ಲಿ 2, 3 ಮತ್ತು 4ರಲ್ಲಿ ಒಂದೊಂದು, 5ರಲ್ಲಿ 3 ಮತ್ತು 6ರಲ್ಲಿ ಒಂದು ಸ್ಥಾನ ಇವೆ

ಉಪ ಚುನಾವಣೆ

ಇದೇ ದಿನ ಅಗಳಗಂಡಿ ಮಂಡಲದಲ್ಲಿ ಟಿ ಪ್ರಕಾಶ್ ಅವರ ಸ್ಥಾನಕ್ಕಾಗಿ ಮೇಗೂರಿನಿಂದ ಹಾಗೂ ಜಯಪುರ ಮಂಡಲದ [illegible]ಮಳಿಗೆ ಚಂದ್ರಶೇಖರ್ ಸ್ಥಾನಕ್ಕಾಗಿ ಉಪ ಚುನಾವಣೆಗಳು ನಡೆಯಲಿವೆ. ಜನತಾ ಪಕ್ಷದ ಈ ಇಬ್ಬರು ಸದಸ್ಯರೂ ರಾಜೀನಾಮೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಕೊಪ್ಪ ತಾ. ವ್ಯ. ಮಾ. ಸಂಘದಲ್ಲಿ ಶಾಮಣ್ಣನವರಿಗೆ ಅಭಿನಂದನೆ

ಕೊಪ್ಪ : ಇಲ್ಲಿನ ತಾ|| ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಮಾಜಿ ಅಧ್ಯಕ್ಷರೂ ಹಾಲಿ ಕಾರ್ಯಕಾರಿ ಮಂಡಳಿ ನಿರ್ದೇಶಕರೂ ಆದ ಶಾಸಕ ಶಾಮಣ್ಣನವರಿಗೆ ಜ. 20ರಂದು ಸಂಘ ಅಭಿನಂದನೆ ಸಲ್ಲಿಸಿತು. ಅಧ್ಯಕ್ಷ ಕೋದಂಡರಾಮ ಭಟ್ ಅಧ್ಯಕ್ಷತೆಯಲ್ಲಿ, ಮನೋಹರ ರಾವ್ ಮುಖ್ಯ ಅತಿಥಿಗಳಾಗಿದ್ದರು.

ಸಹ| ಸಂಘಗಳ ಶೇ. 7ರ ಬಡ್ಡಿ ರಿಯಾಯ್ತಿ ಮೊಬಲಗನ್ನು ನೇರವಾಗಿ ಸಂಘಗಳಿಗೆ ನೀಡಬೇಕೆಂದು ಅಧ್ಯಕ್ಷರು ಆಗ್ರಹಿಸಿದರು. ಹನುಮಂತರಾವ್, ಡಾ|| ಅಯ್ಯಂಗಾರ್ ಶಾಸಕರನ್ನು ಅಭಿನಂದಿಸಿ ಮಾತನಾಡಿದರು. ಸಹಕಾರ ಸಂಘಗಳ ಅವ್ಯವಹಾರ ತನಿಖೆಯಾಗಿರುವೆಡೆ ಕೂಡಲೇ ಅಕ್ರಮವೆಸಗಿದವರ ಮೇಲೆ ಕ್ರಮ ಜಾರಿಗೊಳಿಸುವಂತೆಯೂ, ಉಳಿದೆಡೆ ಕೂಡಲೇ ತನಿಖೆ ನಿರ್ವಹಿಸಬೇಕೆಂದೂ ಸಿರಿಮನೆ ನಾಗರಾಜ್ ಶಾಸಕರನ್ನು ಒತ್ತಾಯಿಸಿದರು.

ಅಭಿನಂದನೆಗೆ ಉತ್ತರಿಸಿದ ಶಾಮಣ್ಣ ಸಹಕಾರಿ ರಂಗವನ್ನು ಪುನಶ್ಚೇತನಗೊಳಿಸಲು ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸುವ ಭರವಸೆಯಿತ್ತರು. ಹಲವು ಸಹ| ಸಂಘಗಳವರು ಶಾಸಕರಿಗೆ ಮಾಲಾರ್ಪಣೆ ಮಾಡಿದರು. ಉ. ವಿ. ಶ್ರೀನಿವಾಸರಾವ್ ವಂದಿಸಿದರು.

ಉತ್ತಮೇಶ್ವರ: ಮಣ್ಣಿನಲ್ಲಿ ಚಿನ್ನದ ನಾಣ್ಯಗಳ ಪತ್ತೆ

ಉತ್ತಮೇಶ್ವರ: ಇಟ್ಟಿಗೆಗಾಗಿ ಮಣ್ಣು ಅಗೆಯುತ್ತಿದ್ದಾಗ ಇಲ್ಲಿಗೆ ಸಮೀಪದಲ್ಲಿ ಹಳೆಯ ಕಾಲದ ಚಿನ್ನದ ನಾಣ್ಯಗಳು ಪತ್ತೆಯಾಗಿವೆ

ಹಳ್ಳಿಮನೆ ಶ್ರೀನಿವಾಸರಾವ್ ಅವರಿಗೆ ಸೇರಿದ ಭೂಮಿಯಲ್ಲಿ ಮೋರಿಸ್ ಡಿ'ಸೋಜ, ಎಲ್ಲಪ್ಪ ಮತ್ತಿತರರಿಗೆ ಡಿ. 30ರಂದು ಈ ನಾಣ್ಯಗಳು ಸಿಕ್ಕಿದ್ದು, ಯಲ್ಲಪ್ಪ "ತನ್ನ ಪಾಲಿನ" 6 ನಾಣ್ಯಗಳನ್ನು ಭಯಪಟ್ಟು ಇಲ್ಲಿನ ದೇವಸ್ಥಾನಕ್ಕೆ ಸಲ್ಲಿಸಿದರು.

ಇದರಿಂದ ವಿಷಯ ಬಹಿರಂಗಗೊಂಡು, ಜ. 15ರಂದು ಶ್ರೀನಿವಾಸರಾಯರ ಮಗ ಶೃಂಗೇಶ್ವರ ಅವರ ಗಮನಕ್ಕೆ ಬಂದು ವಿಚಾರಿಸಿದಾಗ ಮೋರಿಸ್ ತನ್ನಲ್ಲಿದ್ದ 72 ನಾಣ್ಯಗಳನ್ನು ತಂದೊಪ್ಪಿಸಿದರು. ಶೃಂಗೇಶ್ವರ ಕೂಡಲೇ ತಹಸೀಲ್ದಾರ್ ಜೆ. ಎಸ್. ನಾಯಕ್ ಅವರ ಗಮನಕ್ಕೆ ತಂದಾಗ, ಅವರು ತಕ್ಷಣ ಸ್ಥಳಕ್ಕೆ ತೆರಳಿ, ಸ್ಥಳ ಮಹಜರು ನಡೆಸಿ, ನಾಣ್ಯಗಳನ್ನು ವಶಕ್ಕೆ ತೆಗೆದುಕೊಂಡು ಖಜಾನೆಗೆ ಒಪ್ಪಿಸಿದರು.

ಈಗಾಗಲೇ ಹಲವು ಇಟ್ಟಿಗೆಗಳಲ್ಲೂ ಈ ಚಿನ್ನ ನಾಣ್ಯಗಳು ಸೇರಿ ಹೋಗಿದ್ದು, ಇಟ್ಟಿಗೆಗಳನ್ನು ಒಡೆದಾಗ 7 ನಾಣ್ಯಗಳು ದೊರಕಿವೆ. (ಒಟ್ಟು ಈವರೆಗೆ 85) ಸುಮಾರು 3000 ಇಟ್ಟಿಗೆಗಳನ್ನೂ ವಶಕ್ಕೆ ತೆಗೆದುಕೊಂಡು, ರೆವಿನ್ಯೂ ಇನ್‌ಸ್ಪೆಕ್ಟರ್‌ರನ್ನು ಈ ಸ್ಥಳಕ್ಕೆ ರಿಸೀವರ್ ಆಗಿ ನೇಮಿಸಿದ್ದಾರೆ. ಜ. 18ರಂದು ಜಿಲ್ಲಾಧಿಕಾರಿಗಳೂ ಸ್ಥಳಕ್ಕೆ ಭೇಟಿ ನೀಡಿದ್ದರು.

ಪ್ರತಿಯೊಂದೂ 400 ಮಿಲಿ ಗ್ರಾಂ ತೂಕವಿರುವ ಈ ಥಳ ಥಳಿಸುವ ಪುಟ್ಟ [illegible] ನಾಣ್ಯಗಳ ಒಂದು ಮುಖದಲ್ಲಿ [illegible] ಚಿತ್ರವೂ, ಇನ್ನೊಂದೆಡೆ [illegible] ಅಕ್ಷರಗಳೂ ಇವೆ. ಇವು [illegible] ದವು ಆಗಿರಬಹುದೆಂದು ಊಹಿಸಲಾಗಿದೆ.

ವೇದಿಕೆ

ರೈತರ ಸಾಲಗಳನ್ನು ಮನ್ನಾ ಮಾಡುವ ವಿಚಾರ ಈಗ ದೇಶಾದ್ಯಂತ ಬಿಸಿ-ಬಿಸಿ ಚರ್ಚೆಯ ವಸ್ತುವಾಗಿದೆ. ಈ ಕುರಿತು 31.12.89ರ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಜೆ. ಕೆ ವಿಜಯಕುಮಾರ್‌ರವರ ಪತ್ರ ಸಾಕಷ್ಟು ಆಸಕ್ತಿ ಕೆರಳಿಸಿದೆ.

ಅದಕ್ಕೆ ಪೂರಕವಾಗಿ ಸ್ವತಃ ರೈತರೇ ಆದ ಇನ್ನೂ ಮೂವರ ವಿಚಾರಗಳನ್ನು ಇಲ್ಲಿ ಪ್ರಕಟಿಸಿದೆ. —ಸಂ.

ರೈತರ ಸಾಲ ಮನ್ನಾ ಆಗಲಿ

ಮಾನ್ಯರೆ,

ಹಿಂದಿನ ಸರ್ಕಾರ ರೈತರಿಗೆ ಶೇ. 7 ರಷ್ಟು ಬಡ್ಡಿ ರಿಯಾಯ್ತಿ ಮಾಡಿದ್ದರೆ, ಕಾಂಗ್ರೆಸ್ (ಐ) ಪಕ್ಷ ತಾನು ಚುನಾವಣೆಯಲ್ಲಿ ಗೆದ್ದಲ್ಲಿ ರೈತರ ಸಾಲ ಮನ್ನಾ ಮಾಡುವುದಾಗಿ ಹೇಳಿಕೊಂಡಿತ್ತಲ್ಲದೆ, ಚುನಾವಣಾ ಪ್ರಣಾಳಿಕೆಯಲ್ಲೂ ಪ್ರಸ್ತಾಪಿಸಿತ್ತು. ಅದರಂತೆ ಈಗ ಪ್ರಚಂಡ ಬಹುಮತದಿಂದ ಗೆದ್ದಿರುವ ಕಾಂಗ್ರೆಸ್ ಇನ್ನೂ ಈ ಬಗ್ಗೆ ಮೀನ-ಮೇಷ ಎಣಿಸುತ್ತಿರುವುದನ್ನು ನೋಡಿದರೆ, ರೈತರ ಬಗೆಗಿನ ಅವರ ಕಾಳಜಿಯ ಬಗೆಗೇ ಸಂಶಯವಾಗುತ್ತದೆ.

ಸಾಲ ಮನ್ನಾ ಮಾಡದಿದ್ದರೆ ರೈತರು ಸಂಘಟಿತರಾಗಿ ಚಳುವಳಿ ಮಾಡಬೇಕಾಗುತ್ತದೆ ಇಂತಹುದಕ್ಕೆ ಅವಕಾಶ ಕೊಡದೆ ಸರ್ಕಾರ ಕೂಡಲೇ ಸಾಲ ಮನ್ನಾ ಘೋಷಿಸಲಿ. ನಮ್ಮ ಕ್ಷೇತ್ರದಿಂದಲೂ ಪ್ರಚಂಡ ಬಹುಮತದಿಂದ ಗೆದ್ದಿರುವ ಶಾಸಕ ಶಾಮಣ್ಣನವರೂ ಸಹ ಮುಖ್ಯಮಂತ್ರಿಯವರನ್ನು ಈ ಬಗ್ಗೆ ಒತ್ತಾಯಿಸಲಿ.

—ಎಚ್. ವಿ. ನಾಗರಾಜ್,
ಹಾಲ್ಮತ್ತೂರು

ರೈತರ ಸಾಲ ಮನ್ನಾ ಬೇಡಿಕೆಗೆ ಆಧಾರಗಳೇನು ?

ಇದೊಂದು ರಾಜಕೀಯ ದೊಂಬರಾಟ ಎನ್ನಬಹುದು. ಮನ್ನಾ ಏಕೆ ಮಾಡಬೇಕು? ಈ ವಿಚಾರವನ್ನು ವಿಮರ್ಶಾತ್ಮಕವಾಗಿ ತಿಳಿಯಬೇಕು ರೈತರ ಸಾಲ ಮನ್ನಾ ಮಾಡಿದರೆ ರೈತ ಸಂಘ ಇದರ ಲಾಭ ಪಡೆದುಕೊಳ್ಳುತ್ತದೆ ಎಂಬ ನಿಲುವನ್ನು ತಾಳದೆ ಇದರ ಹಿನ್ನೆಲೆಯನ್ನು ಅರಿಯಬೇಕು. ರೈತರ ಸಮಸ್ಯೆಗಳನ್ನು ವಿಚಾರದ ಒರೆಗಲ್ಲಿಗೆ ಹಚ್ಚಬೇಕು. ಈ ಹಿಂದೆ ಬತ್ತದ ಲೆವಿ ಪದ್ಧತಿಯಿಂದ ರೈತನಿಗಾದ ನಷ್ಟವನ್ನು ಮನಗಾಣಬೇಕು, ಈ ನೀತಿಯಲ್ಲಿ, ಕುಳಿತಲ್ಲೇ ಲಾಭ ಮಾಡುವ ಬತ್ತದ ವ್ಯಾಪಾರಿಗೆ ನೀಡಿದ ಸರ್ಕಾರದ ರಿಯಾಯಿತಿಯು ನೀತಿ ಜೇವರಿನ ಜೆಲೆಗೆ ದಕ್ಕಲಿಲ್ಲ.

ಉದಾಹರಣೆಗೆ, ನರಸಿಂಹರಾಜಪುರ ತಾಲ್ಲೂಕನ್ನು ತೆಗೆದುಕೊಳ್ಳೋಣ ರೈತನಿಗೆ ಲೆವಿ ವಿಧಿಸುತ್ತಿದ್ದಾಗ 14 ರಿಂದ 17 ಸಾವಿರ ಕ್ವಿಂಟಾಲ್ ಬತ್ತವನ್ನು ರೈತರಿಂದ ತಾಲ್ಲೂಕಿನಲ್ಲಿ ವಸೂಲು ಮಾಡಿಕೊಳ್ಳಲಾಗುತ್ತಿತ್ತು. ಈಗ ವ್ಯಾಪಾರಿಗಳಿಂದ ಕೇವಲ 6 ಸಾವಿರ ಕ್ವಿಂಟಾಲ್ ಅಕ್ಕಿ (10 ಸಾವಿರ ಕ್ವಿಂಟಾಲ್ ಭತ್ತ) ಪಡೆದುಕೊಳ್ಳಲಾಗುತ್ತಿದೆ. 4ರಿಂದ 7 ಸಾವಿರ ಕ್ವಿಂಟಾಲ್ ಬತ್ತವನ್ನು ಆಗ ಸರ್ಕಾರ ಹೆಚ್ಚಿಗೆ ಈ ತಾಲ್ಲೂಕು ಒಂದರಲ್ಲೆ ರೈತರಿಂದ ಪಡೆದುಕೊಂಡಿದೆ ಎನ್ನುವುದು (ಅತಿ ಕಡಿಮೆ ಬೆಲೆಗೆ) ಸ್ಪಷ್ಟವಾಯಿತು. ಈ ಅಂತರದಿಂದ ವ್ಯಾಪಾರಿಗಳಿಗೆ ನೀಡಿದ ರಿಯಾಯ್ತಿಯ ಹಿನ್ನಲೆ ಏನು?

ವಾಣಿಜ್ಯ ಬೆಳೆಗಳನ್ನು ಬೆಳೆಯುವವರಿಗೆ ಯಾವುದೋ ಒಂದು ಹಿನ್ನೆಲೆಯಡಿಯಲ್ಲಿ ಸರ್ಕಾರ ಸಹಾಯ ಧನ ನೀಡಲು ಹೊರಟಿದೆ. (ಉದಾ : ರಬ್ಬರ್ ಇತ್ಯಾದಿ) ಇದು ಸಾಧಾರಣವಾಗಿ ಎಕರೆಗೆ 1500 ರೂ. ಗಳಿಗೂ ಮಿಕ್ಕಿರುತ್ತದೆ. ಆದರೆ ಯಾವುದೇ ಕೃಷಿ ಸಾಲ ನೀಡಿದರೂ ಎಕರೆಗೆ 1500 ರೂ. ಮಿಕ್ಕುತ್ತಿಲ್ಲ. ಈಗ ಬತ್ತ ಬೆಳೆಯುತ್ತಿರುವ ರೈತ ಕೇಳುತ್ತಿರುವ 'ಮನ್ನಾ' ಈ ಎಲ್ಲದರ ಹಿನ್ನೆಲೆಯಲ್ಲಿ; ಅದರಲ್ಲಿಯೂ ಮೋಡಗಳ ಮೇಲೆ ಅವಲಂಬಿತವಾಗಿ ಆಕಾಶವನ್ನೆ ನೋಡುವ ಮಲೆನಾಡ ರೈತರ ಸ್ಥಿತಿ ಹೀನಾಯವಾದುದು.

ಸರ್ಕಾರಗಳು ರೈತರ ಸಮಸ್ಯೆಗಳನ್ನು ವಿವೇಕದಿಂದ ಪರಿಶೀಲಿಸದೆ ಹೋದರೆ ಕೃಷಿ ಕ್ಷೇತ್ರ ಬರಡಾಗುವುದು ಖಂಡಿತ. ತದನಂತರ, "ಸರ್ಕಾರಗಳೇ ಸಹಾಯ ಧನ ನೀಡುತ್ತವೆ, ಬತ್ತ ಬೆಳೆಯಿರಿ" (ಆಹಾರ ಬೆಳೆ) ಎಂದು ಗೋಗರೆಯುವ ಪರಿಸ್ಥಿತಿ ಉಂಟು ಮಾಡಿಕೊಳ್ಳುವುದಕ್ಕಿಂತ ಇಂದಿನ ಪರಿಸ್ಥಿತಿಯ ಅರಿವನ್ನು ಯಾವುದೇ ಪ್ರತಿಷ್ಠೆ ಇಲ್ಲದೆ, ತಿಳಿದು ಪರಿಹರಿಸುವುದು ಸಂದರ್ಭೋಚಿತ ಕ್ರಮವಾಗುತ್ತದೆ.

ಇಂದಿನ ರಾಜ್ಯ ಸರ್ಕಾರದ ಆಡಳಿತ ಸೂತ್ರ ಹಿಡಿದಿರುವ ಕಾಂಗ್ರೆಸ್ ಪಕ್ಷದಲ್ಲೇ ರೈತ ಪರ ಮತ್ತು ವಿರೋಧದ ವಿಭಿನ್ನ ಹೇಳಿಕೆಗಳ ಮೂಲಕ (ವೀರೇಂದ್ರ ಪಾಟೀಲ್-ಬಂಗಾರಪ್ಪನವರ ಹೇಳಿಕೆಗಳು) ರೈತರ ಮೂಗಿಗೆ ತುಪ್ಪ ಹಚ್ಚಿ ಒರೆಸುವ ಕ್ರಮವನ್ನು ಮುಗ್ಧ ರೈತ ಮೂಕನಾಗಿ ಗಮನಿಸುತ್ತಿದ್ದಾನೆ. "ದೇಶಕ್ಕೆ ಅನ್ನದಾತ ರೈತ"-ಇದು ಕೇವಲ ಘೋಷಣೆಯಾಗಿ ಶೋಷಣೆಯಲ್ಲಿ ಪರ್ಯವಸಾನಗೊಳ್ಳುತ್ತಿದೆ.

ಆಡಳಿತ ಸೂತ್ರ ಹಿಡಿದ (ಯಾವುದೇ ಪಕ್ಷದವರು) ರಾಜಕಾರಣಿಗಳು ತಮ್ಮ ದುಂದುಗಾರಿಕೆಯ ವೆಚ್ಚವನ್ನು ಅಧಿಕಾರಿಗಳ ಮೂಲಕ ವಸೂಲು ಮಾಡುವುದು; ಸಂಬಂಧಿಸಿದ ವ್ಯಾಪಾರಿಗಳನ್ನು ಬೆನ್ನು ತಟ್ಟುವುದು; ಚುನಾವಣೆ ಬಂದಾಗ ಈ ರಾಜಕಾರಣಿಗಳು ಅಧಿಕಾರಿಗಳನ್ನು, ವ್ಯಾಪಾರಿಗಳನ್ನು ಮನ ಬಂದಂತೆ ನಿಂದಿಸಿ, ರೈತರನ್ನು ವಂಚಿಸಿ ಅಧಿಕಾರದ ಗದ್ದುಗೆ ಹಿಡಿದು, ಪುನಃ ಗಡಿಯಾರದ ಮುಳ್ಳು ತಿರುಗುವುದು-ಈ ಕ್ರಮ ನಡೆಯುತ್ತಲೇ ಇದೆ.

ಸ್ವಾತಂತ್ರ್ಯಪೂರ್ವದ ವಿಚಾರ ವಿಮರ್ಶಿಸಿದರೆ. ಆಡಳಿತ ನಡೆಸಿದ ರಾಜ-ಮಹಾರಾಜರುಗಳು ರೈತರಿಗೆ ನೀಡಿದ ಸೌಲಭ್ಯಗಳು (ಕೆರೆ-ಕಟ್ಟೆ ನಿರ್ಮಾಣ, ಮನೆ ಕಟ್ಟಲು ಮರ-ಮಟ್ಟುಗಳ ರಿಯಾಯತಿ, ಇತ್ಯಾದಿ, ಇತ್ಯಾದಿ) ಈಗ ಮಾಯವಾಗಿವೆ. ಅಂದು ಅಧಿಕಾರಿಗಳ-ರೈತರ ಸಂಬಂಧ ಒಂದು ಕುಟುಂಬದ ಸಂಬಂಧದಂತಿದ್ದುದು. ರಾಜಕಾರಣಿಗಳ ಒಡೆದಾಳುವ ನೀತಿಯಿಂದ ಇಂದು ಕೇವಲ ಸಮರವಾಗಿ ಹೊರಹೊಮ್ಮುತ್ತಿದೆ. ರೈತರೂ ಸಹ ಗಮನಿಸಬೇಕಾದ ಪ್ರಮುಖ ಅಂಶ ಈ ಹಿನ್ನೆಲೆಯನ್ನು ಅರಿಯುವುದು; ಜೊತೆಗೆ ರೈತ ಕುಟುಂಬದವರಲ್ಲೂ ಅಧಿಕಾರಿಗಳು-ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದು. ಅಧಿಕಾರಿ ಮತ್ತು ರೈತ ಮೊದಲಿನ ಸಾಮರಸ್ಯಕ್ಕೆ ಹಿಂತಿರುಗಿದರೆ ಭ್ರಷ್ಟ ರಾಜಕಾರಣಿಗಳು, ಪುಢಾರಿಗಳು, ರೈತರನ್ನು ಶೋಷಿಸುವ ವ್ಯಾಪಾರಿಗಳು ತಮ್ಮ ವಂಚನೆಯನ್ನು ತಿಳಿಯದ ಬೇರೊಂದು ದೇಶವನ್ನು ಹುಡುಕಿ ಹೊರಡಬೇಕಾಗುತ್ತದೆ.

ರೈತರಿಗೆ ನೀಡುವ ಯಾವುದೇ ಸಾಲಕ್ಕೆ ಶೇ. 5ರ ಬಡ್ಡಿ ನೀಡುವುದು ರೈತ ಚೇತರಿಸಿಕೊಳ್ಳಲು ಒಂದು ಚಿಕ್ಕ ಅವಕಾಶ ಮಾಡಿದಂತೆ. **ಆದರೆ ಸಾಲ ಮನ್ನಾ ಮಾತ್ರ ಈ ಹಿಂದಿನ ಶೋಷಣೆಗೆ ಪರಿಹಾರವೆಂದು ಭಾವಿಸಬಹುದು.** "ರೈತ ದೇಶದ ಬೆನ್ನು ಮೂಳೆ" ಎಂಬುದು ಸಾಮಾಜಿಕ ಧೋರಣೆ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮನಗಂಡರೆ, ಮಾತ್ರ ರೈತರ ಸಮಸ್ಯೆ ಪರಿಹಾರವಾಗುತ್ತದೆ.

—ಎಂ. ಐ ಶ್ರೀನಿವಾಸ ಮೂರ್ತಿ
('ಮಲೆನಾಡು ಮಲ್ಲಿಗೆ' ಸಂಪಾದಕೀಯದಿಂದ)

ಸಾಲ ಮನ್ನಾ: ಸಿಪಿಐ ಆಗ್ರಹ

ಕೊಪ್ಪ: ರೈತರ ಸಾಲ ಮನ್ನಾ ವಿಷಯದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ವಿಭಿನ್ನ ನೀತಿ ಅನುಸರಿಸದೆ ಕೂಡಲೇ ಮನ್ನಾ ಮಾಡಬೇಕು ಮತ್ತು ಜಪ್ತಿ ಕಾರ್ಯ ನಿಲ್ಲಿಸಬೇಕೆಂದು ಕೊಪ್ಪ ತಾ॥ ಸಿಪಿಐ ಒತ್ತಾಯಿಸಿದೆ ರೈತರು ಸಾಲ ಮರು ಪಾವತಿ ಮಾಡದೆ ಹೋರಾಟಕ್ಕೆ ಸಿದ್ಧರಾಗಲೂ ಅದು ಕರೆ ನೀಡಿ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಭತ್ತಕ್ಕೆ ಬೆಂಬಲ ಬೆಲೆ

ಭತ್ತಕ್ಕೆ ಪ್ರತಿ ಕ್ವಿಂಟಾಲಿಗೆ ಈ ಕೆಳಗಿನಂತೆ ಬೆಂಬಲ ಬೆಲೆಗಳನ್ನು ಸರ್ಕಾರ ನಿಗದಿಪಡಿಸಿದ್ದು, ಮಾರುಕಟ್ಟೆಯಲ್ಲಿ ಇದಕ್ಕಿಂತ ಕಡಿಮೆಯಾದಲ್ಲಿ ಈ ಬೆಂಬಲ ಬೆಲೆಗಳಿಗೆ ಭತ್ತ ಖರೀದಿಸಲು ಸರ್ಕಾರ ಸಿದ್ಧವಿದೆ. ಹೆಚ್ಚಿನ ಮಾಹಿತಿಗೆ ಕೃಷಿ ಇಲಾಖೆಯಲ್ಲಿ ವಿಚಾರಿಸಲು ಕೋರಲಾಗಿದೆ.

ಸಾಮಾನ್ಯ	185 ರೂ.
ಉತ್ತಮ	195 ರೂ.
ಅತ್ಯುತ್ತಮ	205 ರೂ.

ರೈತರಿಗೆ ಬೇಕಿರುವುದು ಉತ್ತೇಜನ; ಸಾಲ ಮನ್ನಾ ಅಲ್ಲ

ಮಾನ್ಯರೆ,

ಮಧ್ಯಮ ವರ್ಗದ ರೈತ ಕುಟುಂಬದಲ್ಲಿ ಜನಿಸಿ, ಸಾಲ ಮಾಡಿರುವವರ ಸಾಲಿಗೇ ಸೇರುವ ನಾನೂ ಸಹಾ ಸಾಲ ಮನ್ನಾ ಬೇಡಿಕೆಯನ್ನು ವಿರೋಧಿಸುತ್ತೇನೆ.

ಈ ಮನ್ನಾದಿಂದ ಈ ದಿನ ನನ್ನ ಹತ್ತು ಸಾವಿರ ರೂ. ಉಳಿಯಬಹುದು. ಆದರೆ ಮುಂದೆ ಈ ಆಧಾರದಲ್ಲಿ ರೈತರಾದ ನಮಗೆ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಂಥದೋ, ಗೊಬ್ಬರವನ್ನು ದುಬಾರಿ ಬೆಲೆಯಲ್ಲಿ ಕೊಳ್ಳಬೇಕಾದಂಥದೋ ಪರಿಸ್ಥಿತಿ; ಕೃಷಿ ಸಾಮಗ್ರಿಗಳ ಗಗನದೆತ್ತರ ಬೆಲೆಗಳು. ರೈತ ಮುಂದೆಂದೂ ಬದುಕದ ಪರಿಸ್ಥಿತಿ ಕಟ್ಟಿಟ್ಟದ್ದು. ಅಲ್ಲದೆ ಉತ್ಪಾದನೆಯೂ ಕುಂಠಿತವಾಗುತ್ತದೆ.

...ರಿಕೋದ್ಯಮಿಗಳು ಕೋಟಿಗಟ್ಟಲೆ ...ಸಿದ್ದಾರೆ; ಆದ್ದರಿಂದ ರೈತರ ಸಾಲ ಮನ್ನಾ ಮಾಡಿದರೆ ದೇಶಕ್ಕೇನೂ ಭಾರವಾಗಲಾರದು" ಎನ್ನುವ ಕೆಲವು ರಾಜಕಾರಣಿಗಳ ವಾದ ಮೂರ್ಖತನದ್ದು !

ಇದಕ್ಕೆ ಉದಾಹರಣೆಯಾಗಿ ನನ್ನ ಸ್ವಂತ ಅನುಭವವನ್ನೇ ಕೊಡಬಹುದು. ಹಿಂದೆ ನಮ್ಮ ಅಡಿಕೆ ತೋಟದಲ್ಲಿ ಬಾಳೆ, ಏಲಕ್ಕಿ, ಮೆಣಸು, ಕಾಫಿ, ವೀಳ್ಯದೆಲೆ ಬೆಳೆಯುತ್ತಿತ್ತು. ಕೆಲವು ಹೊರಗಿನ ಲೂಟಿ ದನಗಳು ಆಗಾಗ ಬೇಲಿ ನುಗ್ಗಿ ಬಂದು ಬೆಳೆ ಹಾಳು ಮಾಡುತ್ತಿದ್ದವು. ನಮ್ಮ ಮನೆಯವರೂ ಸಣ್ಣ ಕರುಗಳನ್ನು ತೋಟಕ್ಕೆ ಬಿಡುತ್ತಿದ್ದರು ಆಗ ನಾನು ನಮ್ಮ ಮನೆಯವರಿಗೆ 'ತೋಟಕ್ಕೆ ಕರುಗಳನ್ನು ಬಿಡಬೇಡಿ. ಬೆಳೆ ಹಾಳಾಗುತ್ತೆ' ಎನ್ನುತ್ತಿದ್ದೆ. ಅದಕ್ಕೆ ಅವರು, "ಯಾರ್‍ಯಾರದ್ದೊ ದನಗಳು ನುಗ್ಗಿ ತಿನ್ನುತ್ತಿವೆ. ನಮ್ಮ ಕರುಗಳು ತೋಟಕ್ಕೆ ಹೋದರೆ ಕೂಗಾಡ್ತೀಯಾ !?" ಅಂತಿದ್ರು. ಈಗ ನನ್ನ ತೋಟದಲ್ಲಿ 'ಉದ ಬೆಳೆ' ಯಾವುದೂ ಇಲ್ಲ 'ಕೈಗಾರಿಕೋದ್ಯಮಿ-ರೈತ' ಈ ಕಿತ್ತಾಟದಲ್ಲಿ ನಮ್ಮ ದೇಶದ ಕತೆ ನನ್ನ ಅಡಿಕೆ ತೋಟದಂತಾಗಬಾರದು !

ರೈತನಿಗೆ ಉತ್ತಮ ಬಿತ್ತನೆ ಬೀಜವನ್ನು ರಿಯಾಯಿತಿ ದರದಲ್ಲಿ ನೀಡಲಿ; ಕೃಷಿ ಸಾಮಗ್ರಿ, ಗೊಬ್ಬರ, ಪಂಪ್ ಸೆಟ್ ಇತ್ಯಾದಿ ಕೃಷಿಗೆ ಅಗತ್ಯವಾದ ವಸ್ತುಗಳನ್ನು ರಿಯಾಯಿತಿ ದರದಲ್ಲಿ ನೀಡಿ, ಉತ್ಪಾದನೆ ಹೆಚ್ಚುವಂತೆ ಮಾಡಿ ದೇಶದಲ್ಲಿ ಆಹಾರ ಉತ್ಪಾದನೆಗೆ ಪ್ರೋತ್ಸಾಹಿಸಲಿ. ಬಡ್ಡಿ ದರದಲ್ಲಿ ರಿಯಾಯಿತಿ ಮಾಡಿ, ಹೆಚ್ಚು ಸೌಲಭ್ಯ ಒದಗಿಸಲಿ ಇವುಗಳಿಂದ ದುಡಿಯುವವನಿಗೂ ಪ್ರೋತ್ಸಾಹ, ದೇಶದ ಪ್ರಗತಿಗೂ ಅನುಕೂಲ.

ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ಇಲ್ಲ-ಸಲ್ಲದ ಆಶ್ವಾಸನೆ ನೀಡಿ, ಗೆದ್ದು ಬಂದು ನಂತರ ದೇಶವನ್ನು ದಿವಾಳಿ ಮಾಡಿ ಹೋಗುವ ಸಂಪ್ರದಾಯ ನಿಲ್ಲಲಿ. ಬೇರೆ ದೇಶದವರಿಗೆ ನಮ್ಮ ದೇಶವನ್ನು ಮಾರಾಟ ಮಾಡುವ ಸಲುವಾಗಿ ಈ ಜನ ಪ್ರತಿನಿಧಿಗಳನ್ನು ಆರಿಸಿ ಕಳಿಸಿದೆವೊ! ಎನಿಸುತ್ತದೆ.

—ಹೊಸ್ಮನೆ ರಮೇಶ್, ಹಿರೇಕೊಡಿಗೆ

ಆಧುನಿಕ ಅಂಧರೋ ಸಾವಿನ ವರ್ತಕರೋ ?

ಮಾನ್ಯರೆ,

ತಾರೀಖು 1-1-90ರ "ಕನ್ನಡಪ್ರಭ" ದಿನ ಪತ್ರಿಕೆಯ 'ದೆಹಲಿಯ ದಂತ ಗೋಪುರದಿಂದ' ಎಂಬ ಅಂಕಣದಲ್ಲಿ ಪ್ರಕಟವಾದ ಎಸ್.ಎಸ್. ರಾಮಪ್ರಸಾದರ "ಪರಿಸರ ರಕ್ಷಣೆ ಮತ್ತು ಪ್ರಗತಿ" ಎಂಬ ಲೇಖನ ಏಕಪಕ್ಷೀಯವಾಗಿದೆ. ಲೇಖಕರು ಕೇವಲ 'ಬೃಹತ್' ಯೋಜನೆಗಳ ಅನುಕೂಲಗಳನ್ನು ಮಾತ್ರ ತಿಳಿಸಿದ್ದಾರೆಯೇ ಹೊರತು ದುಷ್ಪರಿಣಾಮಗಳನ್ನು ತಿಳಿಸಿಲ್ಲ.

ಅವರು ಪಡೆದ ಒಂದೊಂದು ಮತವೂ ಹತ್ತಾರು ನೋವಿನ ಹೃದಯಗಳನ್ನು ಪ್ರತಿನಿಧಿಸುತ್ತದೆ; ಪ್ರತಿಯೊಂದು ಮತವೂ ಮುಂದಿನ ಭವಿಷ್ಯವನ್ನು ಯೋಚಿಸಿ ನೀಡಿದ ಮತವಾಗಿದೆ. ಜನರಿಗೆ ತಮ್ಮ ಮತ್ತು ತಮ್ಮ ಮುಂದಿನ ಪೀಳಿಗೆಗಳ ಕ್ಷೇಮದ ಬಗೆಗೆ ಯೋಚನೆ ಇಲ್ಲದೆ, ಅದಕ್ಕಾಗಿ ಹೋರಾಡುವವರಿಗೆ ಅವರು ಮತ ನೀಡದಿರಲು, ಅವರನ್ನು ತಪ್ಪು ಹಾದಿಗೆಳೆಯುತ್ತಿರುವ ರಾಜಕಾರಣಿಗಳು ಮತ್ತು ಇಂಥ ಲೇಖಕರು ಹಾಗೂ ಲೇಖನಗಳೇ ಕಾರಣವೆಂದರೆ ತಪ್ಪಲ್ಲ.

ಕಾರಂತರಿಗೆ ಬಂದ ಮತಗಳು ಕಡಿಮೆ ನಿಜ. ಆದರೆ, ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಹೋರಾಡಿದವರು ಕೆಲವೇ ಮಂದಿ. 1975ರ ತುರ್ತುಪರಿಸ್ಥಿತಿಯ ವಿರುದ್ಧ ಹೋರಾಡಿದವರೂ ಕೆಲವೇ ಮಂದಿ. ಹಾಗೆಂದು, ಅವರ ಧ್ಯೇಯ ತಪ್ಪಾಗಿತ್ತೆ? ಅಥವಾ ಅವರು ಜಯಶೀಲರಾಗಲಿಲ್ಲವೆ? ಕಾರಂತರಿಗೆ ಬೀಳದ ಮತಗಳೆಲ್ಲ ಅವರ ಧ್ಯೇಯದ ವಿರುದ್ಧ ಎಂದೇ ಅರ್ಥವೆ ಅಥವಾ ಈ ದಿಕ್ಕಿನಲ್ಲಿ ಜಾಗೃತಿಯ ಕೊರತೆ ಎಂದರ್ಥವೆ?

ಶೆಹರಿ ಅಣೆಕಟ್ಟಿನ ಬಗೆಗೆ ಹೇಳುತ್ತಾ ಲೇಖಕರು ಅದನ್ನು ಅತ್ಯುತ್ತಮವಾದುದು ಎಂದಿದ್ದಾರೆ. ಆದರೆ ಸಂಪೂರ್ಣ ಹಿಮಾಲಯದ ತಪ್ಪಲು ಭೂಕಂಪದ ಸರಹದ್ದಿನಲ್ಲಿರುವುದು ಅವರಿಗೆ ತಿಳಿದಿಲ್ಲವೆ? ಈ ಅಣೆಕಟ್ಟಿನ ನಿರ್ಮಾಣದಿಂದ ಲಕ್ಷಾಂತರ ವನ್ಯ ಜೀವಿಗಳು ನಶಿಸುವುದಾಗಲಿ, ಪ್ರಾಕೃತಿಕ ಸಮತೋಲನ ರಕ್ಷಿಸುವ ಲಕ್ಷಾಂತರ ಹೆಕ್ಟೇರುಗಳಷ್ಟು ಅರಣ್ಯ ನಾಶವಾಗುವುದಾಗಲಿ, ಇವರಿಗೆ ಯಾವ ಲೆಕ್ಕಕ್ಕೂ ಇಲ್ಲವೆ? ಈ ಅಣೆಕಟ್ಟಿನ ನಿರ್ಮಾಣದ ಹಿಂದೆ ಕೇವಲ ಕಾಡು ಕಳ್ಳರ, ಸಿಮೆಂಟ್ ಮತ್ತು ಉಕ್ಕಿನ ಕಳ್ಳರ ಕೈವಾಡವೇ ಎದ್ದು ಕಾಣುತ್ತದೆಯೇ ಹೊರತು ಪ್ರಗತಿಯ ಬಗೆಗೆ ಇರುವ ಕಾಳಜಿಯಲ್ಲ.

ಲೇಖಕರು "ಇಂತಹ ಯೋಜನೆಗಳ ವಿರೋಧಿಗಳ ಕೂಗು ಜೋರಾಗಿರುತ್ತದೆ. ಆವುಗಳ ಪರವಾಗಿ ಹೋರಾಡುವವರ ಕೂಗು ಕ್ಷೀಣ" ಎಂದಿದ್ದಾರೆ. ನಿಜ. ಏಕೆಂದರೆ, ಇಂತಹ ಯೋಜನೆಗಳಿಂದ ಲಾಭ ಪಡೆದುಕೊಳ್ಳುವವರಿಗಿಂತ ಪೀಡಿತರಾಗುವವರ ಸಂಖ್ಯೆ ಜಾಸ್ತಿ ಇದ್ದು, ಅವರ

(4ನೇ ಪುಟಕ್ಕೆ)

ಅರ್ಡಿಕೊಪ್ಪಕ್ಕೆ ಬಸ್ ತಂಗುದಾಣ ಬೇಕು

ಮಾನ್ಯರೆ,

ನಾರ್ವೆಗೆ ಸಮೀಪದ ಅರ್ಡಿಕೊಪ್ಪದಲ್ಲಿ ಗ್ರಾಮಸ್ಥರ ಅನೇಕ ವರ್ಷಗಳ ಬೇಡಿಕೆಯಾಗಿದ್ದ ಅಂಗನವಾಡಿ ಶಾಮಣ್ಣನವರು ಶಾಸಕರಾದ ಮೇಲೆ ಸ್ಥಾಪನೆಯಾಗಿದೆ. ಇದಕ್ಕಾಗಿ ಅವರಿಗೂ, ಬಾಲವಿಕಾಸ ಯೋಜನಾಧಿಕಾರಿಗಳಾದ ರಾಜೇಂದ್ರ ಬೇಕಲ್ ಅವರಿಗೂ ಈ ಗ್ರಾಮಸ್ಥರು ಧನ್ಯವಾದಗಳನ್ನು ಅರ್ಪಿಸುತ್ತಾರೆ.

ಅದರಂತೆ ಇಲ್ಲಿ ಒಂದು ಪ್ರಯಾಣಿಕರ ತಂಗುದಾಣ ಬೇಕೆಂದು ಅನೇಕ ವರ್ಷಗಳಿಂದ ಅರ್ಜಿ ಸಲ್ಲಿಸಿದ್ದರೂ ಇಷ್ಟರವರೆಗೆ ಸಂಬಂಧಪಟ್ಟವರು ಈ ಕಡೆ ಗಮನ ಹರಿಸಿಲ್ಲ. ಆದ್ದರಿಂದ ನಮ್ಮ ನೂತನ ಶಾಸಕರಾದ ಶಾಮಣ್ಣನವರು ಈ ಬಗ್ಗೆಯೂ ಹೆಚ್ಚಿನ ಮುತುವರ್ಜಿ ವಹಿಸಿ ಈ ಕಾರ್ಯ ನೆರವೇರಿಸಬೇಕೆಂದು ಅರ್ಡಿಕೊಪ್ಪದ ಗ್ರಾಮಸ್ಥರು ಆಶಿಸುತ್ತಾರೆ.

ಗ್ರಾಮಸ್ಥರ ಪರವಾಗಿ,

—ಬಿ.ಕೆ. ಗಣೇಶಯ್ಯ,
ಅರ್ಡಿಕೊಪ್ಪ.

ಓದುಗರ ಪತ್ರಗಳು

ಉತ್ತರ ಕನ್ನಡದ ಬೇಡ್ತಿ ಜಲವಿದ್ಯುತ್ ಯೋಜನೆ ಸ್ಥಗಿತವಾಗಲು ಅಡಿಕೆ ತೋಟದ ಮಾಲಿಕರು ಕಾರಣ ಎಂದು ಹೇಳಿದ್ದಾರೆ. ಆದರೆ, ಉತ್ತರ ಕನ್ನಡದ ನಿವಾಸಿಗಳು ಇಂತಹ ಅನೇಕ ಯೋಜನೆಗಳಿಂದ ಅದೆಷ್ಟು ಪೀಡಿತರಾಗಿದ್ದಾರೆಂದು ಲೇಖಕರಿಗೆ ಅರಿವಿದೆಯೆ? ಅರಣ್ಯದಿಂದ ನಳನಳಿಸುತ್ತಿದ್ದ ಜಿಲ್ಲೆ ಈಗಾಗಲೇ ಬಹುತೇಕ ಬೋಳಾಗಿದೆ. ಕಾಳಿ ನದಿಗೆ ನಿರ್ಮಿಸಿದ ಏಳು ಅಣೆಕಟ್ಟುಗಳು ಇದರಲ್ಲಿ ಮಹತ್ತರ ಪಾತ್ರ ವಹಿಸಿವೆ. ಅಲ್ಲಿಯ ಬಹಳಷ್ಟು ಮಂದಿ ನಿವಾಸಿಗಳು ತಮ್ಮ ಉತ್ಕೃಷ್ಟ ಜಮೀನುಗಳನ್ನು ಕಳೆದುಕೊಂಡು ನಿರಾಶ್ರಿತರೂ ನಿರ್ಗತಿಕರೂ ಆಗಿದ್ದಾರೆ. ಇದರ ಜೊತೆಗೆ ಬೇಡ್ತಿಯೂ ಬೇಕೆ ?

ಮೊನ್ನಿನ ಲೋಕಸಭಾ ಚುನಾವಣೆಯಲ್ಲಿ ಕಾರಂತರ ಸೋಲನ್ನು ಹೇಳುತ್ತಾ ಅವರು, "ಕಾರಂತರು ಎತ್ತಿ ಹಿಡಿದ ತತ್ವಕ್ಕೆ ಬಹುಮತದ ವಿರೋಧವಿದೆ. ಕೈಗಾ ಸ್ಥಾವರದ ಪರವಾದ ನಿಲುವಿಗೆ ಜಯ ಸಿಕ್ಕಿದೆ ಇದೂ ಚಳುವಳಿ ನಡೆಯುತ್ತಿದೆ" ಎಂದಿದ್ದಾರೆ. ಈ ವಾಕ್ಯ ಎಷ್ಟು ಹಾಸ್ಯಾಸ್ಪದ ! ಲೇಖಕರಿಗೆ, ನಮ್ಮ ದೇಶದಲ್ಲಿ ಚುನಾವಣೆಗಳು ಯಾವ ಬಗೆಯಲ್ಲಿ ನಡೆಯುತ್ತಿವೆ ಎಂದು ತಿಳಿದಿಲ್ಲವೆ? ಹಣ, ಹೆಂಡಗಳ ಹೊಳೆಯೇ ಇಲ್ಲಿ 'ಬಹು ಮತ'ದ ಪ್ರೇರಕ ಶಕ್ತಿ ಎಂಬುದು ಇವರಿಗೆ ಅರಿವಿಲ್ಲವೆ ? ಕಾರಂತರು ಅಂಥ ಯಾವ ಕೆಲಸಗಳನ್ನೂ ನಡೆಸಲಿಲ್ಲ. ಅವರು ಕೇವಲ ಜನಹಿತಕ್ಕಾಗಿ ಸ್ಪರ್ಧಿಸಿದರು. ಕಾರಂತರ ಸೋಲು ಸೋಲೇ ಅಲ್ಲ.

ದಾಖಲಾತಿಗಳಿಗಾಗಿ ಕಛೇರಿಯಿಂದ ಕಛೇರಿಗೆ ಅಲೆತ-ಸುಲಿಗೆ

ಮಾನ್ಯರೆ,

ತಾಲ್ಲೂಕು ಕಛೇರಿಗಳಲ್ಲಿ ಖಾತೆ ಬದಲಾವಣೆ, ಖಾತೆದಾರರು ಮೃತಪಟ್ಟ ಸಂದರ್ಭ, ಕ್ರಯ ಪತ್ರಗಳ ರಿಜಿಸ್ಟರ್ ಮಾಡಿಸುವುದು, ಇನ್‌ಹೆರಿಟೆನ್ಸ್ ರಿಜಿಸ್ಟರ್ ಮತ್ತು ಮ್ಯುಟೇಷನ್ ರಿಜಿಸ್ಟರ್ ಬರೆಯಿಸುವುದು, ಜಮೀನಿನ ಹಾಗೂ ಅನೇಕ ವರ್ಷ ಸರ್ವೆ ಆಗದಿರುವ ಸ್ಥಳದ ಸರ್ವೆ ಮಾಡಿಸುವುದು, ಎಲ್ಲಕ್ಕಿಂತ ಮಿಗಿಲಾಗಿ, ಸ್ವಂತ ಹಿಡುವಳಿಯಲ್ಲಿರುವ ಮರಗಳ ಕಡಿತಲೆ ಪರವಾನಿಗೆಗೆ ಅಗತ್ಯವಾದ ದಾಖಲೆಗಳನ್ನು ಪಡೆಯುವುದು—ಇವೇ ಮುಂತಾದ ಅನೇಕ ಸಂದರ್ಭಗಳಲ್ಲಿ ದಾಖಲೆಗಳು ಸಿಗುವಾಗ ಹಿಡುವಳಿದಾರರಿಗೆ ವಿಪರೀತ ವಿಳಂಬವಾಗಿ ಬಹಳ ತೊಂದರೆಯಾಗುತ್ತಿದೆ. ಈ ಸಂದರ್ಭಗಳಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಲ್ಲಿ, ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಹಾಗೂ

'ಸರ್ವೆಯರ್' ಹತ್ತಿರವೂ ಅನೇಕ ವೇಳೆ ಲೆಕ್ಕವಿಲ್ಲದಷ್ಟು ಕಾಲ ಸತಾಯಿಸುತ್ತಾರೆ. ಇದನ್ನು ಸರಿಪಡಿಸಲು ಹಿಡುವಳಿದಾರರು ಸಂಬಂಧಪಟ್ಟವರಿಗೆ ದೂರು ಬರೆದಲ್ಲಿ, ಮುಂದಿನ ಸಾರಿ ಈ ರೀತಿ ದಾಖಲೆಗಳಿಗೆ ಹೋದಾಗ ಮತ್ತೂ ತೊಂದರೆಗೊಳಗಾಗಬೇಕಾಗುತ್ತದೆ.

2ನೇಯದಾಗಿ, ಮೇಲ್ಕಂಡ ರಿಕಾರ್ಡುಗಳನ್ನು ಒದಗಿಸಿದರೂ, ಯಾವುದೇ ಆಫೀಸಿಗೆ ಹೋಗಲಿ—ಪಹಣಿ ಎಲ್ಲಿದೆ? ಆರ್.ಆರ್. ಇಂಡೆಕ್ಸ್ ಇದೆಯಾ? ಮ್ಯುಟೇಷನ್ ನಕಲು ಕೊಡಿ, ಪಟ್ಟಿ ಎಲ್ಲಿದೆ? ಎನ್.ಒ.ಸಿ. ತೆಗೆದುಕೊಂಡು ಬನ್ನಿ; ವಂಶ ವೃಕ್ಷ ಬರೆದು ಕೊಡಿ; ಇ.ಸಿ ಒದಗಿಸಿ—ಇತ್ಯಾದಿ ಎಷ್ಟೋ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಇದನ್ನೆಲ್ಲಾ ಪಡೆಯುವಲ್ಲಿ ಕೆಲವೊಮ್ಮೆ ರಾಷ್ಟ್ರೀಯ ಉಳಿತಾಯ ಪತ್ರ ಪಡೆಯಬೇಕಾಗುತ್ತದೆ. ಅದು ತನ್ನಿ, ಇದು ತನ್ನಿ, ಇದಲ್ಲ, ಅದು ಬೇಕು, ಇದು ಹೀಗಲ್ಲ—ಎಂಬುದಾಗಿ ಇಲ್ಲದ ಸಮಸ್ಯೆಗಳನ್ನು ಸೃಷ್ಟಿಸಿ, ಆಫೀಸಿನಿಂದ ಆಫೀಸಿಗೆ ಅಲೆದಾಡಿಸುತ್ತಾರೆ.

ಇದನ್ನೆಲ್ಲಾ ತಪ್ಪಿಸಲು ಕಂದಾಯ ಕೊಡತಕ್ಕ ರಶೀದಿ ಪಟ್ಟಿಯಲ್ಲಿ, ಪ್ರತಿಯೊಬ್ಬ ಹಿಡುವಳಿದಾರನೂ ತಾನು ಪಡೆಯುವ ರಶೀದಿಯಲ್ಲಿ, ಅವನು ಇಟ್ಟುಕೊಳ್ಳಬೇಕಾದ ಪ್ರತಿ ದಾಖಲೆಯ ಬಗ್ಗೆಯೂ, ಸರ್ಕಾರದಲ್ಲಿ ಸರಿಯಾಗಿ ದಾಖಲೆ ಮಾಡಲ್ಪಟ್ಟಿದೆ ಎಂದು ಸಮೂದಿಸುವ ಏರ್ಪಾಟು ಮಾಡಬೇಕು. (ಈ ಹಿಂದಿನ ಸರ್ಕಾರ ಈ ಬಗ್ಗೆ ಪಾಸ್ ಬುಕ್ ಮಾದರಿಯ ಪುಸ್ತಕ ಜಾರಿಗೆ ತರುವುದಾಗಿ ಪ್ರಕಟಿಸಿದ್ದರೂ, ಪ್ರಚಲಿತಕ್ಕೆ ಬರಲಿಲ್ಲ.)

ಇನ್ನೊಂದು ವಿಶೇಷವೆಂದರೆ, ಸರ್ಕಾರಕ್ಕೆ ಬೇಕಾದ ದಾಖಲಾತಿಗಳನ್ನೆಲ್ಲ ಒದಗಿಸುವಾಗ ಅನೇಕ ಸಾರಿ ಕೈ ಕಟ ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರದ ಇಲಾಖೆಗಳಲ್ಲಿ ದೊರೆಯುವ ಇಂತಹ ಅವಶ್ಯಕ ದಾಖಲಾತಿಗಳನ್ನು, ಅವರೇ ಕಾದಿಟ್ಟುಕೊಳ್ಳಬಹುದಲ್ಲಾ? ಪ್ರತಿಯೊಂದು ವಿಷಯಕ್ಕೂ ನಮ್ಮನ್ನು ಹಿಂಸಿಸಿ, ಅಲೆದಾಡಿಸುವ ಈ ಸರ್ಕಾರೀ ಚಾಕರಿದಾರರು—ನಾವು ಕೊಡುವ ತೆರಿಗೆ ಹಣದಿಂದ ಸಂತೋಷವಾಗಿ ಬದುಕಲು ಅನುಕೂಲವಿದ್ದರೂ ಕೂಡಾ—ಶೇ. 95 ಮಂದಿ ಇರುವ ರೈತರಾದ ನಮಗೆ ತೊಂದರೆಯಾಗುವಂತೆಯೂ ತಮಗೆ ಅನುಕೂಲವಾಗುವಂತೆಯೂ ಕಾನೂನು ಮಾಡಿಕೊಂಡು ನಮ್ಮನ್ನೆಲ್ಲಾ ವ್ಯವಸ್ಥಿತವಾಗಿ ಸುಲಿಗೆ ಮಾಡುತ್ತಿದ್ದಾರೆ. ಮೇಲ್ಕಂಡಂತೆ ದಾಖಲಾತಿ ಒದಗಿಸಲೂ ನಮಗೆ ಸಾಕಷ್ಟು ಖರ್ಚಾಗಿರುತ್ತೆ. ಅದಕ್ಕಾಗಿ ಸಾಲ ಸೋಲ ಕೂಡ ಆಗುವುದುಂಟು.

ಸರ್ಕಾರದವರು ರೈತರ ಸಾಲ ಮನ್ನಾ, ಬಡ್ಡಿ ಮನ್ನಾ ಇತ್ಯಾದಿ, ಇತ್ಯಾದಿ ಅನೇಕ ವಿಚಾರಗಳ ಕಡೆಗೆ ಕೊಡುವ ಗಮನ—ಆಸಕ್ತಿಗಳನ್ನು, ದಾಖಲಾತಿ ಒದಗಿಸುವ ಈ ವಿಚಾರದಲ್ಲೂ ನೀಡಿದರೆ ತುಂಬಾ ಅನುಕೂಲವಾಗುತ್ತದೆ. ವಿರೋಧಪಕ್ಷಗಳವರು, ರೈತ ಸಂಘದವರು ವಿವಿಧ ಸಂಘ-ಸಂಸ್ಥೆ ಹಾಗೂ ನಾಗರೀಕರು ವಿವಿಧ ವಿಚಾರಗಳ ಮೇಲೆ ಸರ್ಕಾರವನ್ನು ಒತ್ತಾಯಿಸುವ ಸಂದರ್ಭದಲ್ಲಿ ಮೇಲ್ಕಂಡಂತೆ ದಾಖಲಾತಿಗಳನ್ನು ಒದಗಿಸುವ ವಿಚಾರದಲ್ಲೂ ಸರಳತೆಯನ್ನು ತರುವತ್ತ ಸರ್ಕಾರದ ಗಮನ ಸೆಳೆದರೆ ತಲೆ-ತಲಾಂತರದಿಂದ ಅನುಭವಿಸುತ್ತಿರುವ ಈ ಸಮಸ್ಯೆಯನ್ನು ನಿವಾರಿಸಬಹುದಲ್ಲವೆ?

ಎಚ್. ಎ. ವೆಂಕಟಸುಬ್ಬರಾವ್
ಹಿರೇಕೆರೆ, ಕೊಪ್ಪ

ಪ್ರಾಣ-ಆಸ್ತಿ ಹಾನಿ ತಡೆಗಟ್ಟುವರೆ ?

ಮಾನ್ಯರೆ,

ಕೊಪ್ಪ ವಿದ್ಯುತ್ ಸರಬರಾಜು ವಿಭಾಗದಲ್ಲಿ ಇನ್ನೂ ಅಲ್ಲಲ್ಲಿ ಹಳೆಯ ಬಲಿಗೆ ಕಂಬಗಳು ವಿದ್ಯುತ್ ಸರಬರಾಜು ಜಾಲದಲ್ಲಿ ಉಳಿದು ಕೊಂಡಿವೆ.

1. ಇವುಗಳ ಪೈಕಿ ಅತ್ಯಂತ ಜಖಂ ಆಗಿರುವ ಒಂದು ಕಂಬ (ವಸ್ತುಶಃ ಅದರ ಬುಡ ಪುಡಿ ಪುಡಿ ಆಗಿದೆ!) ಹರಿಹರಪುರದ ಸಂಸ್ಕೃತ ಕಾಲೇಜಿನ ದಾರಿಯಲ್ಲಿ ಎರಡು ಸಿಮೆಂಟ್ ಕಂಬಗಳ ನಡುವೆ ಅವುಗಳ ಆಧಾರದ ಮೇಲೆ ನಿಂತಿದೆ. ಈ ಕಂಬದಿಂದ ತಂತಿಗಳು ಜಾರಿದ್ದೇ ಆದಲ್ಲಿ, ಪಕ್ಕದಲ್ಲೇ ಹಾದು ಹೋಗುವ ಎರಡು ಟೆಲಿಫೋನ್ ಲೈನ್‌ಗಳು ವಿದ್ಯುತ್ ಸಂಸರ್ಗ ಪಡೆದು ಜೀವಹಾನಿಗೆ ಕಾರಣವಾಗುವ ಸಂಭವ ಇದೆ.

2. ಬೊಮ್ಮಾಪುರಕ್ಕೆ ಹೋಗಿರುವ ಪ್ರೈಮರಿ ಲೈನ್‌ನಲ್ಲಿ ಇನ್ನೂ ಹಲವು ಲಡ್ಡು ಬಲಿಗೆ ಕಂಬಗಳಿವೆ. ಪ್ರತಿ ಏಪ್ರಿಲ್‌ನಲ್ಲಿ ಬರುವ ಅಡ್ಡ ಮಳೆಗೆ ಈ ಕಂಬಗಳು ಉರುಳಿ 15 ರಿಂದ 20 ದಿನ ಆ ಪರಿಸರದ ರೈತರಿಗೆ ವಿದ್ಯುತ್ ಸರಬರಾಜು ಇಲ್ಲದೆ ಬೆಳೆದು ನಿಂತ ಫಸಲು ಕಳೆದ ಎರಡು ಮೂರು ವರ್ಷಗಳಿಂದ ಹಾನಿಗೀಡಾಗುತ್ತಿದೆ. ರೈತರ ಪಂಪ್‌ಸೆಟ್‌ಗೆ ವಿದ್ಯುತ್ ಸರಬರಾಜು ಸಲ್ಲಿಸುವಲ್ಲಿ ತೋರಿಸುವ ಆತುರ ಲೈನ್ ರಿಪೇರಿ ಬಗ್ಗೆ ತೋರದಿರುವುದು ಅಧಿಕಾರಿಗಳ ಹುಸಿ ನಿಷ್ಠೆಗೆ ಹಿಡಿದ ಕನ್ನಡಿಯಲ್ಲವೆ?

—ನೊಂದ ಗ್ರಾಮಸ್ಥರು,
ಹರಿಹರಪುರ ಬೊಮ್ಮಾಪುರ.

ಗ್ರಾಮಾಭ್ಯುದಯ ಸಂಘ

ಶೃಂಗೇರಿ: ಈ ತಾಲ್ಲೂಕಿನ ಯಡದಳ್ಳಿ ಗ್ರಾಮಸ್ಥರು ಜನವರಿ 10ರಂದು ಸಿಂದೋಡಿಯಲ್ಲಿ ಸಭೆ ಸೇರಿ "ಗ್ರಾಮಾಭ್ಯುದಯ ಸಂಘ, ಸಿಂದೋಡಿ, ಯಡದಳ್ಳಿ, ಗ್ರಾಮ' ಎಂಬ ಹೆಸರಿನಲ್ಲಿ ಸಂಘವೊಂದನ್ನು ರಚಿಸಿಕೊಂಡರು.

ಕಾಮಗಾರಿಗಳಲ್ಲಿ ಅತಿ ಹಿಂದುಳಿದಿರುವ ಈ ಗ್ರಾಮದ ಏಳಿಗೆಗೆ ಸಂಬಂಧಪಟ್ಟ ಕಾಮಗಾರಿಗಳನ್ನು ನೆರವೇರಿಸಿಕೊಳ್ಳುವುದಕ್ಕೆ ಮೊದಲ ಆದ್ಯತೆ ಕೊಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಂಘದ ಪದಾಧಿಕಾರಿಗಳು: ಎಚ್ ಎನ್. ರವೀಂದ್ರ (ಗೌರವ ಅಧ್ಯಕ್ಷರು), ಬಿ. ಕೆ. ಶೇಷಗಿರಿಯಪ್ಪ (ಅಧ್ಯಕ್ಷರು), ಸಿಂದೋಡಿ ಹೊನ್ನಯ್ಯ ಗೌಡ (ಉಪಾಧ್ಯಕ್ಷರು), ಸಿರಿಮನೆ ಅಚ್ಚುತ ರಾವ್ (ಕಾರ್ಯದರ್ಶಿ), ಹೆಂದಿಗದ್ದೆ ನಾಗರಾಜ್ (ಸಹ ಕಾರ್ಯದರ್ಶಿ), ಎಸ್.ಆರ್. ಸುಬ್ರಾವ್ (ಖಜಾಂಚಿ) ಹಾಗೂ 9 ಜನ ಕಾರ್ಯಕಾರಿ ಸಮಿತಿ ಸದಸ್ಯರು.

(ವರದಿ : ಸಿರಿಮನೆ ಭಾಸ್ಕರ ರಾವ್)

ಹಾಲು ಒಕ್ಕೂಟದಿಂದ ಸಂಜೆಯ ಸಂಗ್ರಹಣೆ ಪುನಃ ನಿಲುಗಡೆಗೆ ಉತ್ಪಾದಕರ ಖಂಡನೆ

ಕೊಪ್ಪ: ಹಾಸನ ಹಾಲು ಒಕ್ಕೂಟದವರು ಜ. 10ರಿಂದ ಯಾವ ಮುನ್ಸೂಚನೆಯಿಲ್ಲದೆ ಸಂಜೆಯ ಹಾಲು ಸಂಗ್ರಹಣೆಯನ್ನು ನಿಲ್ಲಿಸಿರುವುದನ್ನು ಉತ್ತಮೇಶ್ವರದ ಹಾಲು ಉತ್ಪಾದಕರ ಸಹಕಾರ ಸಂಘ ತೀವ್ರವಾಗಿ ಆಕ್ಷೇಪಿಸಿದೆ. ಎರಡು ಹೊತ್ತಿನ ಹಾಲು ಸಂಗ್ರಹಣೆ ಬಗ್ಗೆ ಅನೇಕ ಬಾರಿ ಬಾಯಿಮಾತಿನಲ್ಲಿ ಖಾತ್ರಿ ನೀಡಿದ್ದ ಒಕ್ಕೂಟದ ಅಧಿಕಾರಿಗಳು, ಹಾಲು ಸಂಗ್ರಹಣೆ ಹೆಚ್ಚಾಗುವವರೆಗೆ ಕಾಯದೆ ಹೀಗೆ ಪದೇ ಪದೇ ನಿಲುಗಡೆ ಮಾಡುವುದರಿಂದಲೇ ಈ ಪ್ರದೇಶದಲ್ಲಿ ಕ್ಷೀರೋದ್ಯಮದಲ್ಲಿ ತೀವ್ರನಾಗಿ ತೊಡಗಲು ಜನರಿಗೆ ಧೈರ್ಯ ಸಾಲುತ್ತಿಲ್ಲವೆಂದಿದೆ.

ಒಕ್ಕೂಟದ ಭರವಸೆ ನೆಚ್ಚಿ ಸಾಲ ಮಾಡಿ ಮಿಶ್ರತಳಿ ಹಸುಗಳನ್ನು ಕೊಂಡಿರುವ ಇಂಥ ಹಳ್ಳಿಗಳ ಉತ್ಪಾದಕರು ಇದರಿಂದ ತೀವ್ರ ಕಷ್ಟಕೆಸ್ಕೊಳಗಾಗಿದ್ದಾರೆಂದೂ, ಕೂಡಲೇ 2 ಹೊತ್ತು ಹಾಲು ಸಂಗ್ರಹಣೆ ಪುನರಾರಂಭಿಸಬೇಕೆಂದೂ ಸಂಘ ಒತ್ತಾಯಿಸಿದೆ.

ಆಹ್ವಾನ ಕ್ರಿಕೆಟ್ ಟೂರ್ನಿ

ಕೊಪ್ಪ : ಇಲ್ಲಿನ ಫ್ರೆಂಡ್ಸ್ ಕ್ರಿಕೆಟ್ ಅಸೋಸಿಯೇಶನ್ ಆಶ್ರಯದಲ್ಲಿ ಜ. 30 ರಿಂದ ಫೆ. 7 ರವರೆಗೆ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲಾ ಮಟ್ಟದ ಶ್ರೀ ಎಂ. ಎಸ್. ದ್ಯಾವೇಗೌಡ ಸ್ಮಾರಕ ಆಹ್ವಾನಿತ ನಿಗದಿತ ಓವರ್‌ಗಳ ಕ್ರಿಕೆಟ್ ಪಂದ್ಯಾವಳಿ ಬಾಳಗಡಿ ಪ್ರ. ದ. ಕಾಲೇಜು ಕ್ರೀಡಾಂಗಣದಲ್ಲಿ ನಡೆಯಲಿದೆ. 16 ತಂಡಗಳು ಕೂಟದಲ್ಲಿ ಭಾಗವಹಿಸುತ್ತಿವೆ.

ಕೊಪ್ಪ ಪುರಸಭೆ : ಸ್ಪರ್ಧೆಗೆ ಸಿಪಿಐ ಪಕ್ಷದ 8 ಮಂದಿ

ಕೊಪ್ಪ : ಫೆ. 25 ರಂದು ನಡೆಯುವ ಕೊಪ್ಪ ಮಧ್ಯಂತರ ಮಂಡಲ ಪಂಚಾಯ್ತಿ ಚುನಾವಣೆಯಲ್ಲಿ ಆರೂ ಡಿವಿಜನ್‌ಗಳಿಂದ ಪಕ್ಷದ 8 ಮಂದಿ ಅಭ್ಯರ್ಥಿಗಳನ್ನು ನಿಲ್ಲಿಸುವುದಲ್ಲದೆ, 3 ಮಂದಿ ಪ್ರಗತಿಪರ ಸಂಘಟನೆಗಳ ಸದಸ್ಯರನ್ನು ನಿಲ್ಲಿಸಿ ಬೆಂಬಲಿಸಲು ಭಾರತ ಕಮ್ಯೂನಿಸ್ಟ್ ಪಕ್ಷದ ಕೊಪ್ಪ ತಾ|| ಕಾರ್ಯಕಾರಿ ಸಮಿತಿ ಸಭೆ ತೀರ್ಮಾನಿಸಿದೆ.

ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಕೇಂದ್ರವಾದ ಕೊಪ್ಪದಲ್ಲೇ ನ್ಯಾಯಾಲಯ ಸ್ಥಾಪಿಸಬೇಕೆಂದು ಸಭೆ ಒತ್ತಾಯಿಸಿದೆ.

ಬೀಡಿ ಕಾರ್ಮಿಕರ ಸಂಘದ ಬೇಡಿಕೆಗಳು

ಕೊಪ್ಪ : ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಸಭೆ ಜ. 7 ರಂದು ಶಕುಂತಲ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಒಂದು ಕೆ. ಜಿ ಬೀಡಿ ಎಲೆ ಹಾಗೂ 400 ಗ್ರಾಂ ತಂಬಾಕಿಗೆ 1800 ಬೀಡಿಗಳನ್ನು ಕಟ್ಟಬೇಕೆಂಬ ನಿಯಮವಿದ್ದರೂ ಕೆಲಸಗಾರರಿಂದ ಬಲವಂತವಾಗಿ 2400 ಬೀಡಿಗಳನ್ನು ಕಟ್ಟಿಸಿ ಬೀಡಿಯ ಗುಣಮಟ್ಟ ಕಡಿಮೆ ಮಾಡಿಸುತ್ತಿರುವ ಮಾಲೀಕರ ನೀತಿಯನ್ನು ಸಭೆ ತೀವ್ರವಾಗಿ ಆಕ್ಷೇಪಿಸಿತು.

ಕಾನೂನು ರೀತ್ಯಾ ಬೀಡಿ ಕಾರ್ಮಿಕರಿಗೆ ಭವಿಷ್ಯ ನಿಧಿ, ಬೋನಸ್, ಲಾಗ್ ಪುಸ್ತಕ ಹಾಗೂ ವ್ಯವಸ್ಥಿತವಾಗಿ ಕೆಲಸ ನೀಡದಿರುವ ಮಾಲೀಕರ ಮೇಲೆ ಕಾನೂನು ಕ್ರಮ ಜರುಗಿಸುವಂತೆಯೂ, ಬೀಡಿ ಉದ್ಯಮದಲ್ಲಿ ಕಾಂಟ್ರಾಕ್ಟ್ ಪದ್ಧತಿಯನ್ನು ರದ್ದುಗೊಳಿಸಿ, ನೇರವಾಗಿ ಫ್ಯಾಕ್ಟರಿ ಮತಿಯಿಂದಲೇ ಕಾರ್ಮಿಕರಿಂದ ಕೆಲಸ ಪಡೆಯುವ ವ್ಯವಸ್ಥೆ ಮಾಡಬೇಕೆಂದೂ ಸಭೆ ಸರ್ಕಾರವನ್ನು ಒತ್ತಾಯಿಸಿತು.

ವಸತಿ ರಹಿತ ಬೀಡಿ ಕಾರ್ಮಿಕರಿಗೆ ಮನೆ ಕಟ್ಟಿಸಿಕೊಡುವ ಯೋಜನೆ ಜಾರಿಗೆ ಬಂದಿದ್ದರೂ ಈ ನಿಟ್ಟಿನಲ್ಲಿ ಸರ್ಕಾರ ವಿಳಂಬ ಮಾಡುತ್ತಿರುವುದನ್ನು ಸಭೆ ಖಂಡಿಸಿತು. ಜ. 21 ರಂದು ಚಿಕ್ಕಮಗಳೂರಿನಲ್ಲಿ ನಡೆಯಲಿರುವ ಎ.ಐ.ಟಿ.ಯು.ಸಿ ಜಿಲ್ಲಾ ಸಮಾವೇಶಕ್ಕೆ ಐವರು ಪ್ರತಿನಿಧಿಗಳನ್ನು ಸಭೆ ಚುನಾಯಿಸಿತು.

ಭೂ ಅಭಿವೃದ್ಧಿ ಬ್ಯಾಂಕ್‌ಗಳ ಸಿ. ಸಿ. ಎ. ನೌಕರರ ಲೇಖನಿ ಸ್ಥಗಿತ ಮುಷ್ಕರ

ಕೊಪ್ಪ : ರಾಜ್ಯ ಶ್ರೇಷ್ಠ ನ್ಯಾಯಾಲಯದ ಆಜ್ಞೆಗಳು ಹಾಗೂ ಸರ್ಕಾರದ ಈ ಹಿಂದಿನ ಒಪ್ಪಂಬಡಿಕೆ–ಇವುಗಳನ್ನು ಗಣನೆಗೆ ತೆಗೆದುಕೊಂಡು, ಭೂ ಅಭಿವೃದ್ಧಿ ಬ್ಯಾಂಕ್ (ಪ್ರಾ.ಸ.ಕೃ ಗ್ರಾ.ಅ.ಬ್ಯಾಂಕ್)ಗಳ ನೌಕರರನ್ನು ರಾಜ್ಯ ಬ್ಯಾಂಕ್ ನೌಕರರೆಂದು ಪರಿಗಣಿಸುವುದು, ಹಂಗಾಮಿ ನೌಕರರ ಖಾಯಂ, ಪ್ರಾವಿಡೆಂಟ್ ಫಂಡ್ ಕೋಡ್ ಒದಗಿಸುವುದು –ಇವೇ ಮುಂತಾದ 14 ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ಜ. 15ರಿಂದ ರಾಜ್ಯದ ಎಲ್ಲೆಡೆ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಸಿ.ಸಿ.ಎ. ನೌಕರರು "ಲೇಖನ ಸ್ಥಗಿತ" ಮುಷ್ಕರ ನಡೆಸುತ್ತಿದ್ದಾರೆ.

ಕೊಪ್ಪ ತಾ| ವಿ. ಹಿಂ. ಪ.

ಕೊಪ್ಪ : ಇಲ್ಲಿ ಜ. 11 ರಂದು ನಡೆದ ಸಭೆಯಲ್ಲಿ ಕೊಪ್ಪ ತಾ|| ವಿಶ್ವಹಿಂದು ಪರಿಷತ್ತಿಗೆ ಈ ಕೆಳಗಿನವರು ಆಯ್ಕೆಯಾದರು. ಎ. ಮನೋಹರರಾವ್ (ಅಧ್ಯಕ್ಷರು), ಕೆ. ವಿ. ಮಂಜುನಾಥ ಶೆಟ್ಟಿ, ಅಮ್ಮ[illegible] (ಉಪಾಧ್ಯಕ್ಷರು), ಜಿ. ವಿ. ನವಿಲೇಕರ್ (ಕಾರ್ಯಾಲಯ ಕಾರ್ಯದರ್ಶಿ), ವೆಂಕ[illegible] ರಮಣಯ್ಯ (ಸಂಘಟನಾ ಕಾರ್ಯದರ್ಶಿ), ಕೆ. ವಿ. ಗಣೇಶ ಉಡುಪ, ಪಟ್ಟಾಭಿರಾಮ[illegible] ಡಿ. ನಾಗರಾಜ್ (ಸಹಕಾರ್ಯದರ್ಶಿಗಳು), ಶ್ರೀನಿವಾಸರಾವ್ (ಖಜಾಂಚಿ.)

ನಗರ ಸಮಿತಿಗೆ ಪಟವರ್ಧನ್ ಮತ್ತು ಯುವ ವಿಭಾಗಕ್ಕೆ ಮಂಜುನಾಥ್ ಸಂಚಾಲಕರು.

ಪೇಟೆ ಧಾರಣೆ

ಅಡಿಕೆ

ಶಿವಮೊಗ್ಗ : 19–1–1990

ಸರಕು : 3200–3836

ಬೆಟ್ಟೆ : 2200–2820

ಗೊರಬಲು : 1000–2000

ಸಾಗರ : 19.1.1990

ಇಡಿ : 2500–2750

ಚಾಲಿ : 2580–2710

ಆಪಿ : 3900–4060

ಸಿಪ್ಪೆ ಗೋಟು : 1090–1250

ಏಲಕ್ಕಿ

ಕೊಪ್ಪ : 20–1–1990

ರಾಶಿ : 280–310

ಜರಡಿ : 310–335

ಆರಿಸಿದ್ದು : 400–430

ಧಾರಣೆ ಸ್ಥಿರವಾಗಿದ್ದು, ಉತ್ತಮ [illegible]ಕ್ಕಿಗೆ ಸ್ವಲ್ಪ ಏರಿಕೆ ಕಂಡು ಬಂದಿದೆ.

ಆಧುನಿಕ ಅಂಧರೋ ಸಾವಿನ ವರ್ತಕರೋ ?

(3ನೇ ಪುಟದಿಂದ)

ಕೂಗು ಮೇಲಿನವರಿಗೆ ಕೇಳಬೇಕಾದರೆ ಜೋರಾಗಿಯೇ ಇಂಬೇಕಾಗುತ್ತದೆ. ಆದರೆ ಲೇಖಕರು ಮರೆಮಾಚಿರುವ ಇನ್ನರ್ಥ ಸತ್ಯವೇನೆಂದರೆ, ಇಂಥ ಯೋಜನೆಗಳ 'ಪರ' ವಾಗಿರುವವರು ಕೂಗು ಹಾಕುತ್ತ ಕೂರುವುದಿಲ್ಲ, ಬದಲಿಗೆ ಅಧಿಕಾರ ಸ್ಥಾನಗಳಲ್ಲಿ 'ಕೈ'ಯಾಡಿಸಿ, ತಮ್ಮ ಕೆಲಸ ಈಡೇರಿಸಿಕೊಳ್ಳುತ್ತ ಹೋಗುತ್ತಾರೆ! ಹೌದಷ್ಟೆ?

ಅಗತ್ಯವಿರುವಷ್ಟು ವಿದ್ಯುತ್ ಉತ್ಪಾದನೆಗೆ ಅಥವಾ ನೀರಾವರಿಗೆ ಸಂಭವನೀಯ ವಾದ ಅನೇಕ ಮಾರ್ಗಗಳಿವೆ. ಆದರೆ ಬದಲಿಗೆ ನಾವು ಬೃಹತ್ ಜಲಾಶಯಗಳಂತಹ, ಅಣು ವಿದ್ಯುತ್ ಸ್ಥಾವರಗಳಂತಹ ವಿನಾಶಕಾರಿ ಮಾರ್ಗಗಳನ್ನೇ ಬಯಸುವುದಕ್ಕೆ ಈ ಮೇಲೆ ಹೇಳಿದಂತಹ ಕಳ್ಳರ ಕೂಟಗಳು (ಲಾಬಿ) ಹಾಗೂ ಅವರ ಸಮರ್ಥಕರಾಗಿ ಲಾಭ ಗಳಿಸುವ ಇಂಥ ಲೇಖಕರ ಕೂಟಗಳೇ ಕಾರಣವಲ್ಲವೆ?

ಪ್ರಜೆಗಳಿಗೆ ಅಗತ್ಯವಾಗಿರುವುದು ವ್ಯವಸ್ಥೆಯ ಪರವಾಗಿಯೇ ಹೋರಾಡುವ/ಬರೆಯುವ ವ್ಯಕ್ತಿಗಳಲ್ಲ, ಅಥವಾ ವ್ಯವಸ್ಥೆಗೆ ವಿರುದ್ಧವಾಗಿಯೇ ಹೋರಾಡುವ/ಬರೆಯುವ ವ್ಯಕ್ತಿಗಳೂ ಅಲ್ಲ. ಜನರಿಗೆ ಬೇಕಾಗಿರುವುದು ನಿಷ್ಪಕ್ಷಪಾತವಾಗಿ ಒಳಿತು–ಕೆಡಕುಗಳನ್ನು ವಿವರಿಸುವ ವ್ಯಕ್ತಿಗಳು.

ಈ ಶತಮಾನದ ಮಹಾನ್ ತತ್ವಜ್ಞಾನಿ ಬರ್ಟ್ರೆಂಡ್ ರಸ್ಸೆಲ್ ಅವರು ಇಂತಹ ವಿಜ್ಞಾನಿಗಳನ್ನು, ಲೇಖಕರನ್ನು "ಸಾವಿನ ವರ್ತಕರು" ಎಂದು ಕರೆದಿದ್ದಾರೆ. ಅಂದರೆ ಮಾನವ ಕುಲದ ಹಿತ ಬಯಸದೆ ಕೇವಲ ಸರ್ಕಾರದ ಅಥವಾ ತಮ್ಮ ಹಿತಕ್ಕಾಗಿ ಕಾರ್ಯ ನಿರ್ವಹಿಸುವ ವಿಜ್ಞಾನಿಗಳು, ಲೇಖಕರು ಸಕಲ ಜೀವ ಕುಲಕ್ಕೇ ಶಾಪ ಎಂಬುದು ಅವರ ಅಭಿಪ್ರಾಯ.

ಇನ್ನಾದರೂ ಇಂಥ 'ವರ್ತಕರುಗಳು' ಮುಂದಿನ ಪೀಳಿಗೆಗೆ ಮತ್ತು ಜೀವಪರಿಸರಕ್ಕೆ ಶಾಪವಾಗಲಿರುವ ಇಂತಹ ಯೋಜನೆಗಳ ಪರವಾಗಿ ವಕೀಲಿ ಮಾಡುವುದನ್ನು ನಿಲ್ಲಿಸಿ, ಮುಂದೆ ಬರಲಿರುವ ಪೀಳಿಗೆಗಳ ರಕ್ಷಣೆಗೆ ಗಮನ ಹರಿಸುವರೆಂದು ಆಶಿಸೋಣವೇ?

—ಕೆ. ಎನ್ ಅನಿಲ್ ಕುಮಾರ್, ಹರಿಹರಪುರ.

ಬ್ಯಾಂಕ್ ಮೂಲಕ ವಿಮಾ ಕಂತು ಸಲ್ಲಿಕೆ ಸೌಕರ್ಯ

ಕೊಪ್ಪ: ಹೊಸ ವರ್ಷದ ಮೊದಲ ದಿನದಿಂದ ಶೃಂಗೇರಿ, ಕೊಪ್ಪ, ನ. ರಾ. ಪುರ ತಾ||ಗಳ ಎಲ್ಲ ವಿಮಾ ವ್ಯವಹಾರವನ್ನೂ ಕೊಪ್ಪ ಶಾಖೆಯಿಂದಲೇ ನಿರ್ವಹಿಸುವ ಏರ್ಪಾಡಾಗಿದ್ದು, ಈವರೆಗೆ ಚಿಕ್ಕಮಗಳೂರು ಶಾಖೆಗೆ ಬ್ಯಾಂಕ್ ಮೂಲಕ ವಿಮಾ ಕಂತುಗಳನ್ನು ಕಳಿಸುತ್ತಿದ್ದವರು ಅದೇ ಪ್ರಕಾರವೆ ಕೊಪ್ಪ ಶಾಖೆಗೆ ಕಳಿಸಬಹುದೆಂದು ಶಾಖಾ ಮ್ಯಾನೇಜರ್ ರಾಮಚಂದ್ರ ರಾವ್ ತಿಳಿಸಿದ್ದಾರೆ.

ವರ್ಗ – ಬೀಳ್ಕೊಡುಗೆ

ಕೊಪ್ಪ ಶಾಖೆಯಲ್ಲಿ ಸಹಾಯಕ ಮ್ಯಾನೇಜರ್ ಆಗಿದ್ದ ಪಿ.ಡಿ ಶ್ಯಾನಭಾಗ್ ಅವರಿ[illegible]ಡುಪಿಗೆ ವರ್ಗವಾಗಿದ್ದು, ಜ 20 ರಂದು ಸಹೋದ್ಯೋಗಿಗಳು ಅವರನ್ನು ಬೀಳ್ಕೊಟ್ಟರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ, ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.